International Journal of Kannada Research
www.kannadajournal.com

ISSN: 2454–5813
IJKR 2023; 9(3): 164-168
© 2023 IJKR
www.kannadajournal.com
Received: 12-06-2023
Accepted: 16-07-2023

**ಡಾ.ದಿಲೀಪ್.ಎಸ್**
ಸಹಾಯಕ ಪ್ರಾಧ್ಯಾಪಕರು,
ಇತಿಹಾಸ ವಿಭಾಗ,
ಕ.ರಾ.ಮು.ವಿ.ಮೈಸೂರು,
ಕರ್ನಾಟಕ, ಭಾರತ

**Corresponding Author:**
**ಡಾ.ದಿಲೀಪ್.ಎಸ್**
ಸಹಾಯಕ ಪ್ರಾಧ್ಯಾಪಕರು,
ಇತಿಹಾಸ ವಿಭಾಗ,
ಕ.ರಾ.ಮು.ವಿ.ಮೈಸೂರು,
ಕರ್ನಾಟಕ, ಭಾರತ

# ಹುಣಸೂರು ತಾಲ್ಲೂಕಿನ ಶೈವ ಪರಂಪರೆಯ ದೇವಾಲಯಗಳ ಕಲೆ ಮತ್ತು ವಾಸ್ತುಶಿಲ್ಪ ಕುರಿತ ದಾಖಲೀಕರಣ

**ಡಾ.ದಿಲೀಪ್.ಎಸ್**

**ಪೀಠಿಕೆ**

ದೇವಾಲಯದ ಲಕ್ಷಣಗಳನ್ನು ಕುರಿತು ಹಲವಾರು ಪ್ರಾಚೀನ ಗ್ರಂಥಗಳಲ್ಲಿ ಉಲ್ಲೇಖಿಸಲಾಗಿದೆ.ಪ್ರಮುಖವಾಗಿ ದೇವಾಲಯದ ರಚನಾಕ್ರಮವನ್ನು ಎರಡು ರೀತಿಯಲ್ಲಿ ಗುರುತಿಸಬಹುದು. ಒಂದು ಊರ್ಧ್ವಮುಖಕ್ರಮ ಅಥವಾ ಏರುವಿನ್ಯಾಸ ಮತ್ತೊಂದು ತಿರ್ಯಙ್ಮುಖಕ್ರಮ ಅಥವಾ ತಳವಿನ್ಯಾಸ. ದೇವಾಲಯದ ಹೊರಭಾಗದಲ್ಲಿ ಕೆಳಗಿನಿಂದ ಮೇಲಕ್ಕೆ ಒಂದಾದ ಮೇಲೊಂದು ಭಾಗವನ್ನು ನಿಶ್ಚಿತ ರೀತಿಯ ರಚನೆಯನ್ನು ಊರ್ಧ್ವಮುಖ ಕ್ರಮವೆಂತಲೂ ದೇವಾಲಯದ ಒಳರಚನೆಗಳನ್ನು ಗರ್ಭಗೃಹ, ಸುಕನಾಸಿ, ನವರಂಗ, ಮುಖಮಂಟಪಗಳನ್ನು 'ತಿರ್ಯಙ್ಮುಖಕ್ರಮ' ಎಂದು ಕರೆಯಬಹುದು. ದೇವಾಲಯವನ್ನು ವಾಸ್ತು ಪುರುಷನಿಗೆ ಹೋಲಿಸಲಾಗಿದ್ದು, ವಾಸ್ತುಪುರುಷ ನಿಂತಿರುವ ಕ್ರಮವನ್ನು ಊರ್ಧ್ವಮುಖ ಕ್ರಮ ಮಲಗಿರುವ ರೀತಿಯನ್ನು ತಿರ್ಯಙ್ಮುಖಕ್ರಮ ಎನ್ನಲಾಗುತ್ತದೆ.

ದೇವಾಲಯಗಳು ಊರ್ಧ್ವಮುಖ ಕ್ರಮದಲ್ಲಿ ಅನುಕ್ರಮವಾಗಿ 6 ಭಾಗಗಳಿಂದ ಕೂಡಿರುತ್ತದೆ. ಅವುಗಳೆಂದರೆ ಅಧಿಷ್ಠಾನ, ಭಿತ್ತಿ, ಪ್ರಸ್ತರ, ಗ್ರೀವ, ಶಿಖರ ಮತ್ತು ಸ್ತೂಪಿ, ಇದನ್ನು ಷಡ್ವರ್ಗ ಅಥವ ಆರುಗುಂಪು ಎನ್ನಲಾಗುತ್ತದೆ.ಇದರಲ್ಲಿ ಅಧಿಷ್ಠಾನವೇ ಮೊದಲ ಭಾಗವಾಗಿದ್ದು, ಕೆಲವು ಸಮಯದಲ್ಲಿ ಉಪಪೀಠ ಇರುತ್ತದೆ. ಅಧಿಷ್ಠಾನದಲ್ಲಿ ಉಪಾನ, ಜಗತಿ, ಕುಮುದ, ಪದ್ಮ, ಕಂಪ, ಕಪೋತ, ಪಟ್ಟಿಕಾ, ಪ್ರತೀ ಮತ್ತು ದಂತಪಂಕ್ತಿ ಮುಂತಾದ ಪಟ್ಟಿಕೆಗಳಿವೆ. ಮತ್ತೆ ಅಧಿಷ್ಠಾನದಲ್ಲಿ ಅನೇಕ ಪ್ರಕಾರಗಳೂ ಇದ್ದು ಇವುಗಳನ್ನು ಮಂಚಕ, ಪಾದಬಂಧ ಎಂಬ ಮುಖ್ಯ ಪ್ರಭೇಧವೂ ಪಾದಬಂಧ, ಪ್ರತಿಬಂಧ, ಮಂಚಬಂಧ ಮುಂತಾದ ಉಪಪ್ರಕಾರಗಳೂ ಇವೆ. ಅಧಿಷ್ಠಾನದ ಮೇಲಿನ ಭಾಗವೇ ಭಿತ್ತಿ ಇದನ್ನು ಸಾಮಾನ್ಯವಾಗಿ ಗೋಡೆ ಎನ್ನಲಾಗುತ್ತದೆ ಇದನ್ನು ಅಲಂಕೃತ ಭಿತ್ತಿ ಎನ್ನಲಾಗುತ್ತದೆ. ಇನ್ನಿತರ ಅಲಂಕರಣ ಶಿಲ್ಪಗಳನ್ನು ಕೆತ್ತಲಾಗಿರುತ್ತದೆ.

ಭಿತ್ತಿಯ ಮೇಲಿನ ಹಂತವೇ ಪ್ರಸ್ತರ, ಭಿತ್ತಿಯ ಸ್ತಂಭಗಳ ಮೇಲ್ಭಾಗದ ತುದಿಯಿಂದ ಆರಂಭವಾಗಿ ಉತ್ತರ, ವಾಜನ, ವಲ್ಲಭೀ, ಕಪೋತ, ಆಲಿಂಗ, ಆಂತರಿತ, ಪ್ರತೀವಾಜನ ಎಂಬ ಅಂಗಗಳನ್ನು ಹೊಂದಿರುತ್ತದೆ.ಇದರ ಮೇಲ್ಭಾಗದಲ್ಲಿ ಗ್ರೀವ, ಶಿಖರ, ಸ್ತೂಪಿಯ ಭಾಗಗಳಿರುತ್ತವೆ. ಗ್ರೀವದಲ್ಲೂ ಕೋಷ್ಠಗಳಿದ್ದು ಅದರಲ್ಲಿ ದೇವತಾ ಶಿಲ್ಪಗಳಿರುತ್ತವೆ. ಇದನ್ನು ಶಾಲಾ, ಭದ್ರಶಾಲಾ ಎಂದೂ ಕರೆಯುವುದುಂಟು.ಶಿಖರ ಬೇರೆ ಬೇರೆ ಆಕಾರದಲ್ಲಿ ಇರುವುದರಿಂದ ಇದನ್ನು ಆಕಾರಕ್ಕೆ ತಕ್ಕಂತೆ ವಿಷ್ಣುಚ್ಛಂದ, ಬ್ರಹ್ಮಚ್ಛಂದ ರುದ್ರಚ್ಛಂದ, ಶಾಲಾಕಾರ, ಗಜಪೃಷ್ಠಾಕಾರ ಎಂದು ವಿವಿಧ ಹೆಸರುಗಳಿಂದ ಕರೆಯಲಾಗುತ್ತದೆ.ಇವುಗಳು ಪ್ರಧಾನವಾಗಿ 'ನಾಸಿ' ಯಿಂದ ಅಲಂಕೃತವಾಗಿರುತ್ತವೆ. ಇದರ ಮೇಲ್ಭಾಗದಲ್ಲಿ ಕಳಸದ ಭಾಗವಿದ್ದು ಇದು ದೇವಾಲಯದ ಅತ್ಯಂತ ಕೊನೆಯ ಭಾಗವಾಗಿರುತ್ತದೆ.ಕಳಸ ಸ್ಥಾಪನೆಯಿಂದಲೇ ದೇವಾಲಯದ ಪೂಜಾವಿಧಿಗಳು ಪ್ರಾರಂಭವಾಗುವುದರಿಂದ ಇದು ಸಹ ಬಹಳ ಪ್ರಮುಖವಾದುದಾಗಿದೆ. ಗ್ರೀವ(ಕತ್ತು), ಶಿಖರ(ಶಿರ), ಸ್ತೂಪಿಯ ಭಾಗವನ್ನು ಅದರ ಅಲಂಕರಣಕ್ಕೆ ಅನುಗುಣವಾಗಿ ವಾಸ್ತುಶೈಲಿಯನ್ನು ನಾಗರ, ದ್ರಾವಿಡ, ವೇಸರ, ಶೈಲಿಗಳೆಂದು ಕರೆಯಲಾಗುತ್ತದೆ. ದೇವಾಲಯದ ಒಳಭಾಗದಲ್ಲಿ ಮೊದಲಿಗೆ ಇರುವುದು ಗರ್ಭಗೃಹ, ಇಲ್ಲಿ ಮೂಲದೇವರ ಪ್ರತಿಷ್ಠಾಪನೆಯಾಗಿರುತ್ತದೆ.ಕೆಲವೊಮ್ಮೆ ಇದರ ಸುತ್ತಲೂ ದೇವಾಲಯದ ಒಳಭಾಗದಲ್ಲೇ 'ಪ್ರದಕ್ಷಿಣಾಪಥ'ವಿರುತ್ತದೆ.ಮತ್ತೆ ಕೆಲವೊಮ್ಮೆ ಗರ್ಭಗೃಹದಿಂದ ಹೊರಚಾಚಿರುವ ಜಲ ಪ್ರಣಾಳಿಕೆಯೂ ಇರುತ್ತದೆ ಇದನ್ನು ಸೋಮಸೂತ್ರ ಎನ್ನಲಾಗುತ್ತದೆ.ಅನಂತರದಲ್ಲಿ ನವರಂಗವಿರುತ್ತದೆ.ಇದು ಗರ್ಭಗೃಹ

ಮತ್ತು ಸುಖನಾಸಿಗಿಂತ ಸ್ವಲ್ಪ ವಿಶಾಲವಾಗಿರುತ್ತದೆ.ನವರಂಗ ಸ್ವತಂತ್ರ ಕಂಬಗಳನ್ನು ಹೊಂದಿರುತ್ತದೆ.ಇಲ್ಲಿನ ಭುವನೇಶ್ವರಿಗಳು ಸಹ ಸಾಮಾನ್ಯವಾಗಿ ಪದ್ಮಮಂಡಲ, ಅಷ್ಟದಿಕ್ಪಾಲಕರು, ಪರಿವಾರದೇವತೆಗಳು ಹಾಗೂ ಇನ್ನಿತರ ಶಿಲ್ಪಗಳೊಂದಿಗೆ ಅಲಂಕೃತಗೊಂಡಿರುತ್ತದೆ.ನವರಂಗದ ಮುಂಭಾಗದಲ್ಲಿ 'ಮುಖಮಂಟಪ' ವಿರುತ್ತದೆ.ಇದರ ಸುತ್ತಲೂ ಕಕ್ಷಾಸನವಿರುತ್ತದೆ.ಇದರಲ್ಲಿನ ಭುವನೇಶ್ವರಿಗಳು ಅಲಂಕೃತಗೊಂಡಿರುತ್ತದೆ.ಇದರೊಂದಿಗೆ ಸುಕನಾಸಿಯ ಮುಂಭಾಗದಲ್ಲಿ ನಂದಿಮಂಟಪ, ಕಲ್ಯಾಣಮಂಟಪ, ರಂಗಮಂಟಪಗಳೂ ಇರುತ್ತವೆ. ವಿಜಯನಗರದ ಕಾಲಕ್ಕೆ ದೇವಾಲಯದ ಸುತ್ತಲೂ ಅನೇಕ ಮುಖಮಂಟಪಗಳ ರಚನೆ ಆರಂಭವಾಯಿತು.

ವಾಸ್ತು ಶೈಲಿಯ ದೃಷ್ಟಿಯಿಂದ 'ಸೋಪಾನ'ಗಳೂ ಬಹು ಮುಖ್ಯವಾದವು.ಇವು ದೇವಾಲಯದ ದ್ವಾರದ ಬದಿಯಲ್ಲಿರುತ್ತವೆ. ಇವುಗಳನ್ನು ಚಪ್ಪಡಿ ಕಲ್ಲುಗಳಿಂದ ನಿರ್ಮಿಸಲಾಗಿರುತ್ತದೆ.ದೇವಾಲಯಕ್ಕೆ ಹೋಗಲು ಮೆಟ್ಟಿಲುಗಳ ನಿರ್ಮಾಣವನ್ನು ಮಾಡಿರುತ್ತಾರೆ ಅದನ್ನು ಸೋಪಾನ ಎನ್ನುತೇವೆ. ಆದರೆ ಮುಖ್ಯ ದ್ವಾರದ ಬದಿಗಳಲ್ಲಿ ಮಾತ್ರ ಅಲಂಕರಣ ಶಿಲ್ಪಗಳಿರುತ್ತವೆ. ಇವು ಹಸ್ತಿ ಹಸ್ತ, ವ್ಯಾಳ ಹಸ್ತ, ವ್ಯಾರ್ಘ ಹಸ್ತ, ಹಾಗೂ ಇನ್ನಿತರ ಕೆಲವು ಲಕ್ಷಣಗಳನ್ನು ಹೊಂದಿರುತ್ತದೆ. ಈ ಅಂಶಗಳಲ್ಲದೆ ದೇವಾಲಯದ ನವರಂಗ ಮುಖಮಂಟಪಗಳಲ್ಲಿ ಅಲಂಕೃತವಾದ ಕಂಬಗಳು, ದ್ವಾರಬಂಧಗಳು, ಮಕರತೋರಣಗಳು, ಲಲಾಟಬಿಂಬ ಹೀಗೆ ವಿವಿಧ ಅಲಂಕರಣೆಯನ್ನು ಹೊಂದಿರುತ್ತವೆ. ದೇವಾಲಯದ ಮುಂಭಾಗದ ಹೊರಗೆ ಬಲಿಪೀಠ, ದೀಪಸ್ತಂಭ, ಗರುಡಸ್ತಂಭ, ಧ್ವಜಸ್ತಂಭಗಳಿರುತ್ತವೆ. ಸಾಮಾನ್ಯವಾಗಿ ಧ್ವಜಸ್ತಂಭಗಳನ್ನು ಶೈವ ದೇವಾಲಯಗಳ ಮುಂಭಾಗದಲ್ಲಿ ಗರುಡ ಸ್ತಂಭಗಳನ್ನು ವೈಷ್ಣವ ದೇವಾಲಯದ ಮುಂಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನೋಡಬಹುದು.ಜೈನಬಸದಿಗಳಲ್ಲಿ ಮಾನಸ್ತಂಭಗಳಿರುತ್ತವೆ. ಕೆಲವು ದೇವಾಲಯಗಳಲ್ಲಿ ಸುತ್ತಲೂ ಪರಿವಾರ ದೇವತೆಗಳ ಗುಡಿಗಳು ಇರುವುದುಂಟು, ಇವೆಲ್ಲವನ್ನೂ ಒಳಗೊಂಡಂತೆ ಸುತ್ತಲೂ ಪ್ರಾಕಾರ ಇರುತ್ತದೆ. ಪ್ರಾಕಾರದ ಮಧ್ಯಭಾಗದಲ್ಲಿ ಮುಖ್ಯದ್ವಾರವಿರುತ್ತದೆ.ಇದರ ಮೇಲ್ಭಾಗದಲ್ಲಿ ರಾಯಗೋಪುರಗಳು ವಿವಿಧ ತಲಗಳು ಹಾಗೂ ವಿವಿಧ ಅಲಂಕರಣಗಳಿಂದ ಕೂಡಿರುತ್ತದೆ.ಸಾಮಾನ್ಯವಾಗಿ ಪ್ರಾಕಾರ, ಪ್ರಾಕಾರದ ಸುತ್ತಲೂ ಗುಡಿಗಳು ಹಾಗೂ ರಾಯಗೋಪುರಗಳನ್ನು ವಿಜಯನಗರ ಕಾಲದಿಂದ ಕಾಣಬಹುದು.

ಎಲ್ಲಾ ದೇವಾಲಯಗಳಲ್ಲೂ ಮೇಲೆ ಹೇಳಿದ ಎಲ್ಲಾ ಅಂಗಗಳು ಇರಬೇಕು ಆದರೆ ಕೆಲವು ಅಂಗಗಳು ಇಲ್ಲದಿರುಬಹುದು.ಕಾಲಾನುಕ್ರಮದಲ್ಲಿ ಕೆಲವು ಭಾಗಗಳು ಹೊಸದಾಗಿ ಸೇರ್ಪಡೆಗೊಂಡಿರುವುದು ಉಂಟು. ನಿರ್ಮಾಣಕಾರನ ಶಕ್ತಿ ಮತ್ತು ಅವಶ್ಯಕತೆಗೆ ತಕ್ಕಂತೆ ದೇವಾಲಯಗಳು ನಿರ್ಮಾಣಗೊಂಡಿರುತ್ತವೆ. ದೇವಾಲಯಗಳ ನಿರ್ಮಾಣಕ್ರಮವನ್ನು ಶಾಸ್ತ್ರಗಂಥಗಳು ಕಟ್ಟುನಿಟ್ಟಾಗಿ ತಿಳಿಸಿದ್ದರೂ ಎಲ್ಲ ದೇವಾಲಯಗಳೂ ನಿಯಮಗಳನ್ನು ಪಾಲಿಸಿ ಕರಾರುವಕ್ಕಾಗಿ ಸಂಪೂರ್ಣವಾಗಿ ರಚನೆಗೊಂಡಿರುವುದಿಲ್ಲ. ಅಭಿರುಚಿ ಮತ್ತು ದೇವಾಲಯದ ಸೌಂದರ್ಯಾಭಿವೃದ್ಧಿಗೆ ತಕ್ಕಂತೆ ದೇವಾಲಯವನ್ನು ರಚಿಸುವ ಸ್ವಾತಂತ್ರ್ಯವನ್ನು ಶಾಸ್ತ್ರಗ್ರಂಥಗಳಲ್ಲಿಯೇ ಶಿಲ್ಪಿಗೆ ನೀಡಲಾಗಿದೆ. ಹೀಗೆ ಶಾಸ್ತ್ರದ ಹಿನ್ನೆಲೆಯಲ್ಲಿ ಶಿಲ್ಪಿಯ ಅಭಿರುಚಿಯೊಂದಿಗೆ ನಿರ್ಮಾಣವಾದ ದೇವಾಲಯಗಳ ವಿನ್ಯಾಸವನ್ನು ಮೇಲೆ ವಿವರಿಸಿದ ಲಕ್ಷಣಗಳೊಡನೆ ಹೋಲಿಕೆ ಮಾಡಿ ಅಭ್ಯಸಿಸಬೇಕಾಗುತ್ತದೆ. ಹುಣಸೂರು ತಾಲ್ಲೂಕಿನಲ್ಲಿ ಶೈವ ಪರಂಪರೆಯ ಅನೇಕ ದೇವಾಲಯಗಳು ಕಂಡುಬಂದಿರುತ್ತವೆ.ಅವುಗಳನ್ನು ಚೋಳ, ಹೊಯ್ಸಳ, ಗಂಗ, ವಿಜಯನಗರ ಮತ್ತು ಮೈಸೂರು ಒಡೆಯರು ಕಾಲಾನುಕ್ರಮದಲ್ಲಿ ನಿರ್ಮಾಣಗೊಂಡಿರುವ ದೇವಾಲಯಗಳ ಕಲೆ ಮತ್ತು ವಾಸ್ತುಶಿಲ್ಪವನ್ನು ಪ್ರಸ್ತುತಅಧ್ಯಯನದಲ್ಲಿ ಈ ಮುಂದುನಂತೆ ದಾಖಲೀಕರಣಗೊಳಿಸಲಾಗಿದೆ.

ಚನ್ನಸೋಗೆ ಗ್ರಾಮದಲ್ಲಿರುವ ಕೂಡಲಸಂಗಮ ದೇವಾಲಯವು ಚೋಳರ ಕಾಲದಲ್ಲಿ ನಿರ್ಮಾಣಗೊಂಡಿರುವುದು ಕಂಡುಬರುತ್ತದೆ.ಹುಣಸೂರಿನಿಂದ ಸರಿಸುಮಾರು 4 ಕಿಲೋಮೀಟರ್ ದೂರದಲ್ಲಿ ಹನುಗೂಡಿಗೆ ಹೋಗುವ ಮಾರ್ಗದಲ್ಲಿ ಚನ್ನಸೋಗೆ ಗ್ರಾಮದಲ್ಲಿ ಕೂಡಲಸಂಗಮ ದೇವಾಲಯವಿದೆ.ಇದೇ ಚನ್ನಸೋಗೆ ಗ್ರಾಮದಿಂದ ಸುಮಾರು ಊರ ಒಳಗೆ 2 ಕಿಲೋಮೀಟರ್ ದೂರದಲ್ಲಿ ತೋಟದ ಮಧ್ಯ ಚೋಳರ ಕಾಲದ ಒಂದು ಕೂಡಲ ಸಂಗಮೇಶ್ವರ ದೇವಾಲಯವು ಕಂಡುಬರುತ್ತದೆ.ಈಗ ಈ ದೇವಾಲಯವು ತಟ್ಟೆಕೆರೆ ಗ್ರಾಮದ ವೇಣುಗೋಪಾಲರವರ ವಶದಲ್ಲಿರುವ ಚನ್ನಸೋಗೆಯಲ್ಲಿನ ಜಮೀನಿನಲ್ಲಿದೆ.ಶಿಥಿಲವಾಗಿದ್ದಂತಹ ಈ ದೇವಾಲಯವನ್ನು 2006ರಲ್ಲಿ ಜೀರ್ಣೋದ್ಧಾರ ಮಾಡಿ ಪೂಜಾಕೈಂಕರ್ಯವನ್ನು ನಡೆಸಿದ್ದಾರೆ.ಬಹುಶಃ ಪ್ರಾಚೀನ ಹೆಸರು ಬೇರೆಯಾಗಿರಬಹುದು.ಏಕೆಂದರೆ, ಕೂಡಲ ಸಂಗಮ ಎಂದರೆ ಪಕ್ಕದಲ್ಲಿ ಎಲ್ಲಾದರು ಕೂಡಲು ಇರಬೇಕು.ಅಂದರೆ 2 ನದಿಗಳು ಸೇರುವ ಸಂಗಮ ಆದರೆ ಇಲ್ಲಿ ಯಾವುದು ಕಂಡುಬರುವುದಿಲ್ಲ. ಹಾಗಾಗಿ ಕೂಡಲಸಂಗಮೇಶ್ವರ ಎಂಬುದು ಹೊಸದಾಗಿ ಪರಿಭಾವಿಸಿರುವಂತಹ ಹೆಸರಾಗಿರಬಹುದು. ದೇವಾಲಯದ ವಾಸ್ತುವನ್ನು ಗಮನಿಸಿದರೆ ಅತ್ಯಂತ ಚಿಕ್ಕದಾದಂತಹ ಒಂದು ದೇವಾಲಯವಾಗಿದೆ.

ಈ ದೇವಾಲಯವು ಗರ್ಭಗೃಹ, ಸುಕನಾಸಿ, ಮತ್ತು ನವರಂಗವನ್ನು ಒಳಗೊಂಡಿದೆ.ನವರಂಗದ ಹೊರಭಾಗಕ್ಕೆ ಬಂದ ತಕ್ಷಣವೆ ದೇವಾಲಯದಿಂದ ಹೊರಗೆ ಬಂದುಬಿಡುತ್ತೇವೆ. ದೇವಾಲಯದ ಗರ್ಭಗೃಹದಲ್ಲಿ ಒಂದು ಸುಂದರವಾದ ಲಿಂಗವನ್ನು ಪಾಣಿಪೀಠದೊಂದಿಗೆ ಪ್ರತಿಷ್ಠಾಪಿಸಲಾಗಿದ್ದು, ಇಂದಿಗೂ ಕೂಡ ಪೂಜೆಯನ್ನು ಸಲ್ಲಿಸಲಾಗುತ್ತಿದೆ.ಸುಕನಾಸಿ ಮುಂಭಾಗದಲ್ಲಿದ್ದು, ಒಂದು ಚಿಕ್ಕದಾದ ಅಂಕಣವಾಗಿದೆ.ಕೇವಲ 5/5 ರ ಚೌಕಾಕಾರದ ಸುಕನಾಸಿಯಾಗಿದೆ.ಅನಂತರದ ನವರಂಗವು 9 ವಿಶಾಲವಾದ ಅಂಕಣಗಳನ್ನು ಹೊಂದಿದ್ದು 4 ಕಂಬಗಳನ್ನು ನಾವು ಕಾಣಬಹುದು. ಈ ದೇವಾಲಯದ4 ಕಂಬಗಳಲ್ಲಿ ಎಡಭಾಗದಲ್ಲಿ ಒಂದು ಚೌಕಾಕಾರದ ಮಧ್ಯದಲ್ಲಿ ವೃತ್ತಾಕಾರದ ಮೇಲ್ಭಾಗಕ್ಕೆ ಫಲಕವನ್ನು ಹೊಂದಿದಂತಹ ನಂತರದ ಫಲಕದಿಂದ ಮೇಲ್ಭಾಗಕ್ಕೆ ತೊಲೆಗೆ ಜೋಡಿಸಿರುವಂತಹ ಅಲಂಕರಣಗಳಿಂದ ಕೂಡಿದೆ.ಕಂಬದ ಲಕ್ಷಣಗಳನ್ನು ನೋಡಿದರೆ ಇದು ವಿಜಯನಗರ ಕಾಲಕ್ಕಿಂತ ಪೂರ್ವದಲ್ಲಿದ್ದಂತಹ ಲಕ್ಷಣಗಳನ್ನು ಒಳಗೊಂಡಿದೆ.ಅಂದರೆ ದೇವಾಲಯವನ್ನು ಕಲ್ಲಿನಲ್ಲಿ ನಿರ್ಮಿಸಲಾಗಿದ್ದು ಕಂಬಗಳಲ್ಲಾಗಲೀ ಅಥವಾ ಒಳಭಾಗದಲ್ಲಾಗಲ್ಲಿ ಯಾವುದೇ ಅಲಂಕರಣಗಳು ಕಂಡು ಬರುವುದಿಲ್ಲ. ದ್ವಾರಬಂಧಗಳು ಕೂಡ ಅತ್ಯಂತ ಸುಂದರವಾಗಿರುವುದು ಕಂಡುಬರುವುದಿಲ್ಲ. ಸಾಧಾರಣವಾದ ದ್ವಾರ ಬಂಧಗಳನ್ನು ಅಳವಡಿಸಲಾಗಿದೆ.ಕಂಬವು 1–5 ಭಾಗಗಳನ್ನು ಹೊಂದಿದ್ದು, ಮಧ್ಯದ ನವರಂಗದಲ್ಲಿ ಇತ್ತಿಚೇಗೆ ಸಿಮೆಂಟನ್ನು ಅಳವಡಿಸಲಾಗಿದೆ.ಒಟ್ಟಿನಲ್ಲಿ ಸುಂದರವಾಗಿ ಮೂಡಿಬಂದಿದೆ.ಇಲ್ಲಿನ ಕಂಬದಲ್ಲಿ ಕೆಳಭಾಗದಲ್ಲಿ ಚೌಕಾಕಾರವಿದ್ದು ಅದರ ಮೇಲೆ ವೃತ್ತಾಕಾರ ಮೇಲ್ಭಾಗದಲ್ಲಿ ಅಷ್ಟಕೋನಾಕಾರದ ವೃತ್ತಗಳು ಮತ್ತು ಫಲಕಗಳು ಕಂಡುಬರುತ್ತದೆ.ದೇವಾಲಯದ ಶಿವಲಿಂಗದ ಎದುರುಗಡೆ ಅಂದರೆ ಸುಖನಾಸಿಯಲ್ಲಿ ಕುಳಿತಿರುವ ಒಂದು

ನಂದಿಯನ್ನು ನಾವು ಕಾಣಬಹುದು.ಕುಳಿತಿರುವ ನಂದಿಯು ಚಿಕ್ಕದಾಗಿದ್ದರು ತುಂಬ ಸುಂದರವಾಗಿ ಕಡೆಯಲ್ಪಟ್ಟಿವೆ. ಭುವನೇಶ್ವರಿ ಇದ್ದರೂ ಕೂಡ ಸಾಧಾರಣವಾದ ಸ್ವರೂಪದಿಂದ ಕಂಡುಬರುತ್ತದೆ.ಭುವನೇಶ್ವರಿಯು ಅಷ್ಟಕೋನಾಕೃತಿಯಾಗಿರುವುದನ್ನು ನಾವು ಕಾಣಬಹುದು.

ದೇವಾಲಯದ ಹೊರಭಾಗವನ್ನು ನೋಡಿದರೆ.ದೇವಾಲಯದ ಏರುವಿನ್ಯಾಸದಲ್ಲಿ ಅಧಿಷ್ಠಾನ, ಭಿತ್ತಿ, ಹಾರದ ಭಾಗಗಳಿದ್ದು, ವಿಮಾನದ ಭಾಗ ಕಂಡುಬರುವುದಿಲ್ಲ. ಹಾರದಲ್ಲಿಯು ಕೂಡ ವಿಶೇಷ ಅಲಂಕರಣಗಳು ಕಂಡುಬರುವುದಿಲ್ಲ. ವಲಭಿ ಪ್ರದೇಶವು ಚೆನ್ನಾಗಿದೆ.ವಲಭಿ ಪ್ರದೇಶದ ಕೆಳಭಾಗಲ್ಲಿ ಸ್ತಂಭಿಕೆಗಳನ್ನು ಅಳವಡಿಸಲಾಗಿದೆ.ಮಧ್ಯದಲ್ಲಿ ದೇವಕೋಷ್ಠಗಳಿದ್ದು, ದೇವಕೋಷ್ಠಗಳಲ್ಲಿ ಯಾವುದೇ ವಿಗ್ರಹಗಳು ಕಂಡುಬರುವುದಿಲ್ಲ. ಸಾಮಾನ್ಯ ರೀತಿಯ ಒಂದು ಜಗತಿ, ಉಪಾನ, ಮತ್ತು ಪಟ್ಟಕುಮುದ ಸಾಧಾರಣವಾದ ವಾಜನಗಳನ್ನು ಮಾಡಲಾಗಿದೆ.ಬಹುಶಃ ಇದು ಮಂಚಬಂಧ ಅಧಿಷ್ಠಾನದಂತೆ ಕಂಡುಬರುತ್ತದೆ.ನಾಳಸೂತ್ರವು ಉತ್ತರದ ಕಡೆಗಿದ್ದು, ಸುಂದರವಾದ ನಾಳಸೂತ್ರವಾಗಿದೆ.ಈ ಆಧಾರದ ಮೇಲೆ ಈ ದೇವಾಲಯವನ್ನು ಪುರುಷ ದೇವಾಲಯ ಎಂದು ಹೇಳಬಹುದು.ದೇವಾಲಯವು ಸಾಧಾರಣವಾದ ಭಿತ್ತಿಯನ್ನು ಹೊಂದಿದ್ದು ಭಿತ್ತಿಯ ಮೇಲೆ ಯಾವುದೇ ಅಲಂಕರಣಗಳು ಕಂಡುಬರುವುದಿಲ್ಲ. ಭಿತ್ತಿಯ ಮೇಲೆ ಅರೆ ಸ್ತಂಭಗಳ ರಚನೆಯನ್ನು ಕಾಣಬಹುದು.

ದೇವಾಲಯದ ಭಿತ್ತಿಯ 3 ಭಾಗದಲ್ಲಿ ದೇವ ಕೋಷ್ಟಕಗಳ ರಚನೆಯನ್ನು ಕಾಣಬಹುದು.ಈ ದೇವಕೋಷ್ಟಕಗಳಲ್ಲಿ ಯಾವುದೇ ಶಿಲ್ಪಗಳು ಕಂಡುಬರುವುದಿಲ್ಲ. ಉತ್ತರ ಭಾಗದ ಕೋಷ್ಟಕದ ಮೇಲ್ಭಾಗದಲ್ಲಿ 3 ಕಳಸಗಳ ರಚನೆಯನ್ನು ಕಾಣಬಹುದು.ದೇವಾಲಯ ಹಿಂಭಾಗದಲ್ಲಿ ದೇವಕೋಷ್ಠದಲ್ಲಿ ಇರುವಂತಹ ಕೀರ್ತಿಮುಖ ಗಮನ ಸೆಳೆಯುತ್ತದೆ.ಕೀರ್ತಿಮುಖವು ಸುಂದರವಾಗಿದ್ದು ಜ್ವಾಲಮಾಲೆಗಳಿಂದ ಕೂಡಿದಂತಹ ಕಣ್ಣುಗಳನ್ನು ಹೊಂದಿದ್ದು ಮತ್ತು ನಾಲಗೆಯನ್ನು ಹೊರಚಾಚಿರುವಂತೆ ಖಂಡರಿಸಿರುವುದನ್ನು ನೋಡಬಹುದು.ಕೀರ್ತಿಮುಖದ ಹಣೆಯಲ್ಲಿ ನಾಮವಿರುವಿರುವಂತೆ ಚಿತ್ರಿಸಲಾಗಿದೆ.ಈ ಎಲ್ಲ ಒಳ ಹೊರ ಭಾಗಗಳನ್ನು ಗಮನಿಸಿದರೆ ಚೋಳರ ಕಾಲದಲ್ಲಿ ನಿರ್ಮಿಸಿರುವ ದೇವಾಲಯ ಎಂಬುದು ಸ್ಪಷ್ಟವಾಗುತ್ತದೆ.

ಕೂಡಲ ಸಂಗಮ ದೇವಾಲಯದ ಬಲಭಾಗದಲ್ಲಿ ಒಂದು ವಿಶೇಷವಾದ ದೊಡ್ಡದಾದ ಕಲ್ಲಿನ ಗಾಣವಿದೆ.ಆ ಗಾಣವು ಬಹುಶಃ ಚನ್ನಸೋಗೆಯ ಕೂಡಲಸಂಗಮೇಶ್ವರ ದೇವಾಲಯದ ನಂದಾದೀಪಕ್ಕಾಗಿ ಉಪಯೋಗಿಸುತ್ತಿದ್ದಿರಬಹುದು.ನಂದಾದೀಪಕ್ಕಾಗಿ ಬಳಸುವಂತಹ ಎಣ್ಣೆಗಾಗಿ ಗಾಣಗಳನ್ನು ದಾನಕೊಟ್ಟಿರುವುದನ್ನು ನಾವು ಬಹಳ ಪ್ರಾಚೀನಕಾಲದಲ್ಲಿ ಕಾಣುತ್ತೇವೆ. ಆದರೆ ದಾನ ಕೊಟ್ಟಂತಹ ಗಾಣವು ಬಹುಶಃ ವಿಜಯನಗರರ ಕಾಲದ ನಂತರದ್ದು.ಆಗಿನ ಕಾಲದಲ್ಲಿ ಇಂತಹ ಕಲ್ಲುಗಾಣಗಳನ್ನು ದೇವರ ನಂದಾ ದೀಪಕ್ಕಾಗಿ ದಾನ ಮಾಡುತ್ತಿದ್ದುದ್ದನ್ನು ನಾವು ಕಾಣುತ್ತೇವೆ.

ಚನ್ನಸೋಗೆ ಗ್ರಾಮದ ಈಶ್ವರ ದೇವಾಲಯವು ತೋಟದ ಮಧ್ಯಭಾಗದಲ್ಲಿ ಇನ್ನೊಂದು ಚಿಕ್ಕದಾದ ದೇವಾಲಯವೇ ಆಗಿದೆ.ಈ ದೇವಾಲಯದ ಒಳಭಾಗದಲ್ಲಿ ಗರ್ಭಗೃಹ ಮತ್ತು ಮುಖಮಂಟಪ ಮಾತ್ರಕಂಡುಬರುತ್ತವೆ. ಫಾಂಸನ ಶಿಖರದಂತೆ ಕಂಡುಬರುವ ಈ ಚಿಕ್ಕ ಗುಡಿಯ ಗರ್ಭಗೃಹದಲ್ಲಿ ಲಿಂಗವಿದ್ದು, ಹೊರಭಾಗದಲ್ಲಿ ನಾಲ್ಕು ಕಂಬಗಳಿಂದ ಕೂಡಿದ ಚಿಕ್ಕದಾಂತಹ, ಒಂದು ಮುಖ ಮಂಟಪವನ್ನು ನೋಡಬಹುದು. ಪ್ರಶ್ನೆ ಎಂದರೆ ಈ ದೇವಾಲಯವು ಶಿಥಿಲಾವಸ್ಥೆಗೆ ತಲುಪಿದ್ದು ಬೇರೆಯಾವ ವಾಸ್ತುಭಾಗಗಳು ಉಳಿದು ಬಂದಿಲ್ಲ. ವಾಸ್ತು ಭಾಗಗಳಲ್ಲಿಯೂ ಕೂಡ ಯಾವುದೇ ಅಲಂಕರಣಗಳು ಕಂಡು ಬರುವುದಿಲ್ಲ. ಆದರೆ ದೇವಾಲಯದ ಮುಂಭಾಗದಲ್ಲಿ 2 ಕಲ್ಲುಗಾಣಗಳಿದ್ದು, ಬಹುಶಃ ಒಂದು ಕಾಲದಲ್ಲಿ ಈ ದೇವಸ್ಥಾನ ಅತ್ಯಂತ ಸಮೃದ್ಧಿಯಿಂದ ಕೂಡಿರಬೇಕು. ಆದರೆ ಇಂದು ಯಾವುದೇ ರೀತಿಯ ವೈಭೋಗಗಳು ಇದಕ್ಕೆ ಇಲ್ಲವಾಗಿ ಕಣ್ಮರೆಯಾಗಿದೆ.ಈ ಗುಡಿಯ ಇನ್ನಷ್ಟು ಅಡಿಪಾಯಗಳು ಕಂಡುಬಂದಿದ್ದು, ದೇವಾಲಯ ದೊಡ್ಡದಾಗಿದ್ದು, ಅದು ಇತ್ತೀಚೆಗೆ ನಾಶಹೊಂದಿರಬಹುದು ಎಂಬುದನ್ನು ನಾವು ಗ್ರಹಿಸಬಹುದಾಗಿದೆ.

ತೊಂಡಾಳಿನ ಸೋಮೇಶ್ವರ ದೇವಾಲಯವನ್ನು ಹೊಯ್ಸಳರು ನಿರ್ಮಾಣವನ್ನು ಮಾಡಿರುವುದು ಕಂಡುಬರುತ್ತದೆ.ಹುಣಸೂರಿನಿಂದ ಸರಿಸುಮಾರು 5 ಕಿಲೋಮೀಟರ್ ದೂರದಲ್ಲಿ ಮರುದೂರಿಗೆ ಹೋಗುವ ಮಾರ್ಗದಲ್ಲಿದೆ. ಈ ದೇವಾಲಯದಲ್ಲಿ ಈಶ್ವರ ಲಿಂಗ, ನಂದಿ, ಗಣಪತಿ, ಬಸವ, ಶಿವ.ತೊಂಡಾಳುವಿನಲ್ಲಿ ಒಂದು ಹೊಯ್ಸಳರ ಅರಸ ನರಸಿಂಹನ ಕಾಲದ ದೇವಾಲಯವಿದ್ದು, ಇಂದು ಅದರ ಎಲ್ಲಾ ಪ್ರಾಚೀನತೆಗಳನ್ನು ಕಳೆದುಕೊಂಡಿದೆ.ಕಾರಣ ಎಂದರೆ ದೇವಾಲಯದ ಮುಂಭಾಗದಲ್ಲಿ ಹಸರು ಬಣ್ಣವನ್ನು ಬಳಿದು ದೇವಾಲಯದ ಅಂದವನ್ನು ಕೆಡಿಸಿದ್ದಾರೆ.ಅಲ್ಲದೇ ದೇವಾಲಯದ ಶಿಥಿಲಗೊಂಡ ಭಾಗಗಳನ್ನು ಗಾರೆಗಳಿಂದ ಮುಚ್ಚಿದ್ದಾರೆ.ಇದರಿಂದಾಗಿ ದೇವಾಲಯವು ತನ್ನ ಪ್ರಾಚೀನ ವೈಭವವನ್ನು ಕಳೆದುಕೊಂಡಿದೆ.ಇಂದು ಹೊರಗಿನಿಂದ ನಾವು ನೋಡಿದರೆ ಅತ್ಯಂತ ಆಧುನಿಕವಾದಂತಹ ದೇವಾಲಯವೇ ನಿರ್ಮಿಸಲ್ಪಟ್ಟಿರುವಂತೆ ಕಾಣುತ್ತದೆ.ಆದರೆ ಅದರ ಮೂಲತಃ ಎರಡು ಕಂಬಗಳನ್ನು ನಾವು ಗಮನಿಸಿದರೆ, ಅದು ಹೊಯ್ಸಳರ ಮತ್ತು ಕಲ್ಯಾಣಿ ಚಾಲುಕ್ಯರ ಮಾದರಿಯ ಕಂಬಗಳಂತೆ ಕಂಡುಬರುತ್ತದೆ.ದ್ವಾರಬಂಧವು ಕೂಡ ಕಲ್ಲಿನಲ್ಲಿಯೇ ನಿರ್ಮಿಸಲ್ಪಟ್ಟಿದೆ. ಇನ್ನು ಅಲ್ಲಿ ಶಾಸನವು ಕೂಡ ನಮಗೆ ಕಂಡುಬರುತ್ತದೆ.ಎರಡು ಶಾಸನವು ಕಂಬದಲ್ಲಿ ಬರೆದಿದ್ದು ಹೊಯ್ಸಳರ ಕಾಲದ ಶಾಸನವಾಗಿದೆ.ದ್ವಾರಬಂಧದಲ್ಲಿ ಯಾವುದೇ ಅಲಂಕರಣವಿಲ್ಲದಿದ್ದರೂ ಕೂಡ ದ್ವಾರಬಂಧವು ಸುಂದರವಾಗಿದ್ದು ಒಳಭಾಗದಲ್ಲಿ ಲಿಂಗವಿದೆ. ದೇವಾಲಯದ ಹೊರಭಾಗದಲ್ಲಿ ಶುಕನಾಸಿಯಲ್ಲಿ ಒಂದು ನಂದಿ ವಿಗ್ರಹವಿದೆ.ತಳನಕ್ಷೆಯನ್ನು ನೋಡುವಾಗ ಕೇವಲ ಗರ್ಭಗೃಹ ಮತ್ತು ಶುಕನಾಸಿಯು ಕಂಡುಬರುತ್ತವೆ. ಏರುನಕ್ಷೆಯಲ್ಲಿ ಒಂದು ಸಾಧಾರಣವಾದ ದೇವಾಲಯವಿದ್ದು ಎಲ್ಲ ಭಾಗಗಳು ಆಧುನೀಕರಣಗೊಂಡಿವೆ.

ಹುಣಸೂರು ತಾಲ್ಲೂಕಿನಿಂದ 5 ಕಿ.ಮೀ.ದೂರದಲ್ಲಿ ಕಿರುಜಾಜಿ ಹಾಗೂ ರಾಮಾಪಟ್ಟಣಕ್ಕೆ ಹೋಗುವಾಗ ಎಡಕ್ಕೆ ತಿರುಗಿದರೆ ಒಂದು ಕಿಲೋಮೀಟರ್ ದೂರದಲ್ಲಿ ತೊಂಡಾಳು ಗ್ರಾಮ ಸಿಗುತ್ತದೆ. ತೊಂಡಾಳು ಗ್ರಾಮದಿಂದ ಪೂರ್ವಭಾಗದಲ್ಲಿ ಒಂದು ಕಾಲುವೆ ಹರಿಯುತ್ತಿದೆ.ಈ ಕಾಲುವೆಯ ಬಳಿ ಹೊಲಗದ್ದೆಗಳ ನಡುವೆ ಈ ದೇವಾಲಯವನ್ನು ಕಾಣಬಹುದು.ಈ ದೇವಾಲಯವು ಗರ್ಭಗೃಹ ಮತ್ತು ಸುಕನಾಸಿಗಳನ್ನು ಹೊಂದಿದೆ.ಮುಂದಿನ ಎಲ್ಲಾಭಾಗವು ಮುರಿದುಹೋಗಿದ್ದು, ಜಗತಿಯು ಮಣ್ಣಿನಲ್ಲಿ ಮುಚ್ಚಿಹೋಗಿದೆ.ಗರ್ಭಗುಡಿದಲ್ಲಿ 1.5 ಅಡಿ ಎತ್ತರದ ಪೀಠದ ಮೇಲೆ ಶಿವಲಿಂಗವನ್ನು ಇಡಲಾಗಿದೆ.ಸುಖನಾಸಿಯಲ್ಲಿ ಗಮನಿಸಿದರೆ ಸುಮಾರು ಒಂದು ಅಡಿ ಎತ್ತರದ ನಂದಿಯನ್ನು ಕಾಣಬಹುದು.ಸುಖನಾಸಿಯಲ್ಲಿ ಬಲಗಡೆ ಗೋಡೆಯಲ್ಲಿ ಗಣಪತಿ ವಿಗ್ರಹವನ್ನು ಕಾಣಬಹುದು.ಸುಕನಾಸಿಯ ಬಾಗಿಲಲ್ಲಿ 5 ಲಂಭ ಪಟ್ಟಿಕೆಗಳನ್ನು ಕಾಣಬಹುದು.ಅಲ್ಲಿರುವ ವಿತಾನವನ್ನು ಗಮನಿಸಿದರೆ ನಾಭಿಚ್ಛಂದ ವಿತಾನವನ್ನು ಹೊಂದಿದೆ.ಇದರಲ್ಲಿ ಮೇಲ್ಹಾವಣಿಯನ್ನು ಕಲ್ಲಿನ ತೊಲೆಗಳ ಜೋಡಣೆಗಳಿಂದ ಮುಚ್ಚಲಾಗಿರುತ್ತದೆ.ಇದರ ಜೋಡಣೆಯು ಮೂರು ಅಥವ ನಾಲ್ಕು ಸ್ತರಗಳಲ್ಲಿದ್ದು, ಪ್ರತಿ ಸ್ತರವು

ತೆರೆದ ಚೌಕದ ಮೂಲೆಭಾಗವನ್ನು ಮಾತ್ರ ಮುಚ್ಚಿದೆ.ಎರಡು ಮೂರು ಸ್ತರದಲ್ಲಿ ಜೋಡಿಸಿದ ನಂತರ ಉಳಿದ ಭಾಗಕ್ಕೆ ಒಂದು ಶಿಲಾಫಲಕವನ್ನು ಮೇಲ್ಭಾಗದಲ್ಲಿ ಮುಚ್ಚಲಾಗಿದೆ.ಆದ್ದರಿಂದ ವಿತಾನವು ಸ್ವಲ್ಪ ಒಳಮುಖವಾಗಿ ಏರಿದಂತಾಗಿದೆ.ಇದರಲ್ಲಿ ಅವಶ್ಯಕತೆಗೆ ಅನುಗುಣವಾಗಿ ಅಲಂಕರಣಗಳನ್ನು ಮಾಡಿರುವುದನ್ನು ಕಾಣಬಹುದು.ಗರ್ಭಗೃಹ, ಅಂತರಾಳದ ನಾಭಿಚ್ಛಂದ ವಿತಾನವನ್ನು ಸರಳವಾಗಿ ಹೊಂದಿದೆ.

ಹೊರಭಾಗದಲ್ಲಿ 2 ಸ್ತಂಭಗಳನ್ನು ಗೋಡೆಗೆ ಸೇರಿದಂತೆ ನಿಲ್ಲಿಸಲಾಗಿದೆ. ಆ 2 ಸ್ತಂಭದಲ್ಲೂ ಸಹ ಹೊಯ್ಸಳ ಅರಸ 1ನೇ ನರಸಿಂಹನ ಶಾಸನವನ್ನು ಕಾಣಬಹುದು.ಇದು ಪದ್ಮಕಾಂತ ಸ್ತಂಭದ ರೀತಿ ಕಾಣಿಸುತ್ತದೆ ಎಂದು ಹೇಳಬಹುದು.ಮೇಲ್ಭಾಗದಲ್ಲಿ ಬೋದಿಗೆಯನ್ನು ಸಹ ಕಾಣಬಹುದು.ದೇವಾಲಯದ ಮೇಲ್ಭಾಗದಲ್ಲಿ ಚಿಕ್ಕಗೋಪುರವನ್ನು ನಿರ್ಮಿಸಲಾಗಿದೆ.ಅಲ್ಲಿ ಸುತ್ತಲು ಶಿವಲಿಂಗ, ಈಶ್ವರನ ವಿಗ್ರಹ ನಂದಿಗಳನ್ನು ಬಿಡಿಸಲಾಗಿದೆ.ಗರ್ಭಗುಡಿಯ ಹೊರಭಾಗ ಅಧಿಷ್ಠಾನದ ಪಟ್ಟಿಕೆಗಳಲ್ಲಿ ಶಾಸನದ ಸಾಲುಗಳನ್ನು ಕಾಣಬಹುದು.

ಧರ್ಮಾಪುರದ ಈಶ್ವರ ದೇವಾಲಯವು ಹೊಯ್ಸಳ ಮತ್ತು ವಿಜಯನಗರದ ಅರಸ ಕಾಲದ್ದು ಎಂದು ಗುರುತಿಸಲಾಗಿದೆ.ಹುಣಸೂರಿನಿಂದ ಸರಿಸುಮಾರು ಹದಿನಾಲ್ಕು ಕಿಲೋಮೀಟರ್ ದೂರದಲ್ಲಿ ಗದ್ದಿಗೆ ಮಾರ್ಗದಲ್ಲಿದೆ. ಮೈಸೂರಿನಿಂದ ಬೋಗಾದಿ ಮಾರ್ಗದಲ್ಲಿ ಸುಮಾರು 40 ಕಿಲೋಮೀಟರ್.ಈ ದೇವಾಲಯದಲ್ಲಿ ಶಿವಲಿಂಗ, ಬಸವ, ಗಣಪತಿ, ಲಲಾಟಬಿಂಬದಲ್ಲಿ ಈಶ್ವರ ವಿಗ್ರಹಗಳಿವೆ. ಧರ್ಮಾಪುರದ ಈಶ್ವರ ದೇವರ ದೇವಾಲಯಯವು ಚನ್ನಕೇಶವ ದೇವಾಲಯದ ದಕ್ಷಿಣದಿಕ್ಕಿಗೆ ಪೂರ್ವಭಿಮುಖವಾಗಿ ನಿರ್ಮಿಸಲ್ಪಟ್ಟಿದೆ.ಈ ದೇವಾಲಯಕ್ಕೆ ಗರ್ಭಗುಡಿ, ಸುಕನಾಸಿ, ನವರಂಗವನ್ನು ಒಳಗೊಂಡಿದೆ.

ಗರ್ಭಗುಡಿಯಲ್ಲಿ 1.5 ಅಡಿ ಎತ್ತರದ ಪಾಣಿಪೀಠದ ಮೇಲೆ ಈಶ್ವರ ಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ.ಕಪ್ಪುಶಿಲೆಯಿಂದ ಕೂಡಿದ್ದು ಗರ್ಭಗುಡಿಯು 4 ಅಂಕಣದಿಂದ ಕೂಡಿದೆ.ಸುಕನಾಸಿಯಲ್ಲಿ ಈಶ್ವರನ ವಾಹನವಾದಂತಹ ನಂದಿಯನ್ನು ಸ್ಥಾಪಿಸಲಾಗಿದೆ.ನಂದಿಯು ಸುಮಾರು 2 ಅಡಿ ಎತ್ತರವಿದೆ.ಸುಕನಾಸಿಯಲ್ಲಿ ಹೊಯ್ಸಳರ ಕಾಲದ ವಾಸ್ತುಶಿಲ್ಪದಲ್ಲಿ ಕಂಡುಬರುವಂತಹ ದ್ವಾರಬಂಧಗಳು ಕಂಡುಬರುತ್ತದೆ.ಅದರಲ್ಲಿ ಕಂಬದ ರೀತಿಯ 5 ಪಟ್ಟಿಕೆಗಳು ಅಂದರೆ ಪಂಚ ಶಾಖೆಗಳು ನಂತರ ಮೇಲೆ ಲಲಾಟಬಿಂಬದಲ್ಲಿ ಈಶ್ವರ ಮತ್ತು 2 ಗಜಗಳು ಸೇರಿ ಪುಷ್ಪಾರ್ಚನೆಯನ್ನು ಎದ್ದುನಿಂತು ತನ್ನ ಸೊಂಡಿಲಿನಿಂದ ಮಾಡುತ್ತಿರುವುದನ್ನು ಚಿತ್ರಿಸಲಾಗಿದೆ. ಹಾಗೂ ಸುಕನಾಸಿಯಲ್ಲಿ ಮಹಾ ಪರಮೇಶ್ವರನ ಪುತ್ರ ವಿಘ್ನವಿನಾಶಕ ಗಣಪತಿಯ ಕಲ್ಲಿನ ವಿಗ್ರಹವನ್ನು ಇಟ್ಟಿದ್ದಾರೆ. ನವರಂಗದಲ್ಲಿ ನೃತ್ಯ ಪ್ರದರ್ಶನಕ್ಕೆಂದು ಜಗಲಿ, ಅಲ್ಲಿ ನಾಲ್ಕು ಕಂಬಗಳು ಕಂಡುಬರುತ್ತವೆ. ಪೂರ್ವಾಶ್ರ, ಕಂಬ ಎಂದು ಹೇಳಬಹುದು.ನಾಲ್ಕು ಕಂಬಗಳು ತೊಲೆಯನ್ನು ಹೊತ್ತು ನಿಂತಿವೆ. ಒಂದು ಕಂಬದಲ್ಲಿ 15ನೇ ಶತಮಾನಕ್ಕೆ ಸೇರಿದ ಒಂದು ಶಾಸನವನ್ನು ಬರೆಯಲಾಗಿದೆ.

ಭುವನೇಶ್ವರಿಯು ಕಮಲದ ಹೂ ವಿತಾನವನ್ನು ಒಳಗೊಂಡಿದೆ.ಪದ್ಮಶಿಲೆಯ ನಾಭಿಚ್ಛಂದ ವಿತಾನವು ಇಲ್ಲಿ ಕಂಡುಬರುತ್ತದೆ.ಕಮಲದ ಮೊಗ್ಗಿನಂತಿರುವ ಇದು ವಿತಾನದಲ್ಲಿ 8 ದಿಕ್ಕಿಗೆ 8 ಪದ್ಮಶಿಲೆಯನ್ನು ಹೊಂದಿದೆ.ನವರಂಗದ ವಿತಾನವು ಹೀಗಿದ್ದು, ಗರ್ಭಗೃಹದ ವಿತಾನವು ಅರಳಿದ ಕಮಲದ ಶಿಲೆಯ ರೀತಿಯಿದೆ.ಇಲ್ಲು ಸಹ 8 ದಿಕ್ಕುಗಳಿಗೂ 8 ಪದ್ಮದ ಹೂಗಳನ್ನು ಬಿಡಿಸಲಾಗಿದೆ.ಹೊರಭಾಗದಿಂದ ನೋಡಲು ಇದು ಮೇಲ್ಭಾಗದಲ್ಲಿ ಇತ್ತಿಚಿಗೆ ನಿರ್ಮಿಸಿದ ನಂದಿಯನ್ನು ಎಲ್ಲಾದಿಕ್ಕುಗಳಲ್ಲು ಸ್ಥಾಪಿಸಿದ್ದಾರೆ. ಈ ದೇವಾಲಯದ ಲಕ್ಷಣವನ್ನು ಗಮನಿಸಿದರೆ ಗರ್ಭಗುಡಿ ಹಾಗೂ ಸುಕನಾಸಿಯು ಹೊಯ್ಸಳರ ವಂಶದ ಕೊನೆಯ ಅರಸರು ನಿರ್ಮಿಸಿದ್ದಾರೆ. ಏಕೆಂದರೆ ಗರ್ಭಗುಡಿ ಹಾಗೂ ಸುಕನಾಸಿಯು ಹೊಯ್ಸಳರ ಲಕ್ಷಣಗಳನ್ನು ಒಳಗೊಂಡಿದೆ, ಆದರೆ ನವರಂಗವನ್ನು ಗಮನಿಸಿದಾಗ ಅಲ್ಲಿನ ಕಂಬಗಳ ಲಕ್ಷಣವು ವಿಜಯನಗರದ ಮಾದರಿಯ ಕಂಬದಂತೆ ಕಂಡುಬರುತ್ತವೆ, ಹಾಗೂ ಶಾಸನದ ಕಾಲವು 15ನೇ ಶತಮಾನವಾಗಿರುವುದರಿಂದ ಹೊಯ್ಸಳರ ಕೊನೆಯ ಅರಸರು ಅಥವಾ ವಿಜಯನಗರ ಕಾಲದ ಅರಸರು ನಿರ್ಮಿಸಿರಬಹುದೆಂದು ಹೇಳಬಹುದು.

ಬಿಳಿಕೆರೆ ಗ್ರಾಮದ ಮಲ್ಲೇಶ್ವರ ದೇವಾಲಯವು ಊರಿನ ಪೂರ್ವದಿಕ್ಕಿಗೆ ಕೆರೆಯ ದಡದಲ್ಲಿದೆ.ಇದರ ನಿರ್ಮಾಣ ಕಾಲವು ನಿಖರವಾಗಿ ತಿಳಿದುಬಂದಿಲ್ಲ. ದೇವಾಲಯವು ಗರ್ಭಗೃಹ ಮತ್ತು ನವರಂಗವನ್ನು ಹೊಂದಿದ್ದು, ಗರ್ಭಗೃಹದಲ್ಲಿ ಪೀಠದ ಮೇಲೆ ಲಿಂಗವಿದೆ.ನವರಂಗದಲ್ಲಿ ನಂದಿ ಶಿಲ್ಪವಿದೆ.ದೇವಾಲಯದ ನವರಂಗದಲ್ಲಿ ನಾಲ್ಕು ಕಂಬಗಳಿವೆ. ಮಧ್ಯದಂಕಣದ ಭುವನೇಶ್ವರಿದಲ್ಲಿ ಪದ್ಮಮಂಡಲವಿದೆ.ಈ ಮೂಲ ದೇವಾಲಯವನ್ನು ಮೈಸೂರು ಒಡೆಯರ ಕಾಲದಲ್ಲಿ ನಿರ್ಮಾಣಮಾಡಿರಬಹುದು.ದೇವಾಲಯವು ಸಾಮಾನ್ಯವಾಸ್ತು ರಚನೆಯನ್ನು ಹೊಂದಿದೆ.ದೇವಾಲಯದ ಮುಂಭಾಗದಲ್ಲಿ ಸುಂದರವಾದ ವಾಸ್ತು ಪ್ರಕಾರಗಳನ್ನು ಕೆತ್ತಲಾಗಿದೆ.ನವರಂಗದ ದ್ವಾರ ಸಾಮಾನ್ಯವಾಗಿದ್ದು, ಅಷ್ಟೇನು ಅಲಂಕರಣದಿಂದ ಕೂಡಿಲ್ಲ. ದ್ವಾರದ ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದ್ದು, ಇಕ್ಕೆಲಗಳಲ್ಲಿ ಶಿವನ ದ್ವಾರಪಾಲಕರ ಶಿಲ್ಪಗಳಿವೆ. ನವರಂಗ ಒಂಬತ್ತು ಅಂಕಣವನ್ನು ಹೊಂದಿದೆ.

ಮೋದೂರು ಗ್ರಾಮದ ಮುಖ್ಯ ರಸ್ತೆಯ ಬದಿಯಲ್ಲಿಯೇ ನೂರಾರು ವರ್ಷಗಳ ಹಿಂದಿನ ಗತವೈಭವವನ್ನು ಸಾರುವ ಶಾಸನಗಳು, ಕಲ್ಲಿನಲ್ಲಿ ಕೆತ್ತಿರುವ ಚಿತ್ರಗಳು ಇದ್ದವೆಂದು ಸ್ಥಳಿಯರು ಹೇಳುತ್ತಾರೆ. ರಸ್ತೆಯಲ್ಲಿ ಹಾದುಹೋಗುವವರು ಒಂದು ಕ್ಷಣ ನಿಂತು ನೋಡಲೇಬೇಕೆನಿಸುವಂತೆ ಮಾಡುವ ಈ ಶಾಸನಗಳು ತಾಲೂಕಿನ ಗಾವಡಗೆರೆ ಹೋಬಳಿಯ ಮೋದೂರು ಗ್ರಾಮದಲ್ಲಿದ್ದು, ಆ ಕಾಲದ ಹಿರಿಮೆ, ಗರಿಮೆಯನ್ನು ಸಾರುತ್ತಿವೆ. ಮೋದೂರು ಗ್ರಾಮದ ಹೃದಯ ಭಾಗದಲ್ಲಿರುವ ಬಸವೇಶ್ವರ ದೇವಾಲಯದ ಸುತ್ತ ಇಂತಹ ಹತ್ತಾರು ಶಾಸನಗಳು ಕಣ್ಣಿಗೆ ಕಾಣುತ್ತವೆ. ಕೆಲವು ಶಿವಪಾರ್ವತಿ, ಸ್ವಾಗತಕಾರರು ಹಾಗೂ ಇನ್ನಿತರ ಚಿತ್ರಗಳನ್ನು ಒಳಗೊಂಡಿದ್ದರೆ, ಇನ್ನು ಕೆಲವು ಹಳೆಗನ್ನಡ ಲಿಪಿಯನ್ನು ಬಳಸಿರುವ ಯಾವುದೋ ಸಂದೇಶವನ್ನು ನೀಡುತ್ತಿವೆ. ಈ ಊರಲ್ಲಿ ಇಷ್ಟು ಶಾಸನಗಳಿರಲು ಕಾರಣವಾದರೂ ಏನು ಎನ್ನುವುದು ಮಾತ್ರ ಇಂದಿಗೂ ತಿಳಿದಿಲ್ಲ.

ಬಸವೇಶ್ವರ ದೇವಾಲಯಕ್ಕೂ ಮೈಸೂರು ಸಂಸ್ಥಾನದ ಒಡೆಯರ ವಂಶದ ಮಹಾರಾಜರಿಗೂ ಈ ಊರಿಗೂ ಅವಿನಾಭಾವ ನಂಟಿದೆ.ಆ ಕಾಲದಲ್ಲಿ ಮಹಾರಾಜರು ಬೇಟೆಯಾಡಲು ಈ ಭಾಗಕ್ಕೆ ಬರುತ್ತಿದ್ದರು.ದಟ್ಟ ಅರಣ್ಯ ಪ್ರದೇಶವಾಗಿದ್ದ ಈ ಭಾಗದಲ್ಲಿ ಆಗಿನ ಕಾಲದಲ್ಲಿ ಗ್ರಾಮಸ್ಥರು ಸೇರಿ ಬಸವೇಶ್ವರ ದೇವಾಲಯವನ್ನು ಕಟ್ಟಿದ್ದರು. ಮಹಾರಾಜರುಗಳು ಇಲ್ಲಿಗೆ ಬಂದು ದೇವರಲ್ಲಿ ಪ್ರಾರ್ಥಿಸಿ ಬೇಟೆಗೆ ಹೊರಡುತ್ತಿದ್ದುದು ವಾಡಿಕೆಯಾಗಿತ್ತು.ತಮ್ಮ ನಿರೀಕ್ಷೆಯಂತೆ ಬೇಟೆ ಸಫಲವಾದ ಗುರುತಾಗಿ ದೇವಾಲಯಕ್ಕೆ ಮಹಾರಾಜರುಗಳು ಚಿನ್ನದ ಪದಕಗಳನ್ನು ನೀಡಿದ್ದಾರೆ.ವಿಜಯದ ಸಂಕೇತವನ್ನು ತಿಳಿಸುತ್ತವೆಯೇ? 300 ವರ್ಷಗಳ ಹಿಂದೆ ಒಡೆಯರ ಕಾಲದಲ್ಲಿ ಮೈಸೂರು ಸಂಸ್ಥಾನಕ್ಕೂ, ಪಿರಿಯಾಪಟ್ಟಣ ಸಂಸ್ಥಾನಕ್ಕೂ ಯುದ್ಧ ನಡೆದಿತ್ತು.ಈ ಸಂದರ್ಭದಲ್ಲಿ ಮೈಸೂರು ಒಡೆಯರು ತಮ್ಮ ಸೈನಿಕ

ಪಡೆ, ಆನೆ, ಕುದುರೆಗಳನ್ನು ಈ ಮಾರ್ಗವಾಗಿ ಕೊಂಡೊಯ್ಯುತ್ತಿದ್ದರೆನ್ನುವುದು ಇಲ್ಲಿನ ಗ್ರಾಮಸ್ಥರು ಹೇಳುತ್ತಾರೆ.ಊರಿನ ಹೊರಭಾಗದಲ್ಲಿ ಮಂಟಿಕೆರೆ ಎಂಬ ಭೂಮಿಯಿದ್ದು, ಇಲ್ಲಿ ಕುದುರೆ ಹಾಗೂ ಆನೆಗಳನ್ನು ಕಟ್ಟಿಹಾಕಿ ನೀರುಣಿಸುತ್ತಿದ್ದರು.

ಕೊಳವಿಗೆ ರಾಮಲಿಂಗೇಶ್ವರ ದೇವಾಲಯವು ಮೈಸೂರು ಒಡೆಯರ ಕಾಲದಲ್ಲಿ ನಿರ್ಮಾಣಗೊಂಡಿರುತ್ತದೆ.ಇದು ಹುಣಸೂರಿನಿಂದ 18 ಕಿಲೋಮೀಟರ್ ಹನಗೋಡು ಹೋಬಳಿಗೆ 3 ಕಿಲೋಮೀಟರ್ ದೂರದಲ್ಲಿದೆ.ಈ ದೇವಾಲಯದಲ್ಲಿ ನಂದಿ, ಹನುಮಂತ, ಶಿವಲಿಂಗ, ಗಜ, ವೀರಭದ್ರನ ವಿಗ್ರಹಗಳಿವೆ. ಹುಣಸೂರು ತಾಲ್ಲೂಕಿನ ಹನಗೋಡು ಹೋಬಳಿಗೆ ಸೇರಿದ ಹಾಗೂ ಹನಗೋಡಿನಿಂದ ಮುಂದೆ 4 ಕಿಲೋಮೀಟರ್ ದೂರದಲ್ಲಿ ಕೊಳವಿಗೆ ಎಂಬ ಗ್ರಾಮವಿದೆ.ಅಲ್ಲಿ ಲಕ್ಷ್ಮಣತೀರ್ಥ ನದಿಯ ದಡದಲ್ಲಿ ರಾಮಲಿಂಗೇಶ್ವರಸ್ವಾಮಿ ದೇವಾಲಯವನ್ನು ಕಾಣಬಹುದು.

ರಾಮಲಿಂಗೇಶ್ವರ ದೇವಾಲಯವನ್ನ ಮೈಸೂರು ಒಡೆಯರ ಕಾಲದಲ್ಲಿ ಕಟ್ಟಿರಬಹುದು.ಆದರೆ ಅಲ್ಲಿಯ ಜನರು ಹೇಳುವ ಪ್ರಕಾರ ಈ ದೇವಾಲಯವನ್ನು ಚೋಳರ ಕಾಲದಲ್ಲಿ ಕಟ್ಟಲಾಗಿದೆ ಭಾವಿಸಿದ್ದಾರೆ.ಆದರೆ ಇದಾವುದಕ್ಕೂ ಸಾಕ್ಷಿ ಆಧಾರಗಳ ದಾಖಲೆಗಳು ದೊರೆತಿಲ್ಲ. ಇಲ್ಲಿಯ ದೇವಾಲಯದ ಲಕ್ಷಣವನ್ನು ಗಮನಿಸಿದರೆ ಇದು ಮೈಸೂರು ಒಡೆಯರ ಕಾಲದಲ್ಲಿ ಕಟ್ಟಿರಬೇಕು.ಕಡಿಮೆ ಎಂದರೂ 300ವರ್ಷಗಳ ಹಿಂದೆ ಎಂದು ಭಾಸವಾಗುತ್ತದೆ.

ದೇವಾಲಯದ ಗರ್ಭಗುಡಿ ನಾಲ್ಕು ಅಂಕಣದಾಗಿದ್ದು ಗರ್ಭಗುಡಿಯಲ್ಲಿ ಶಿವಲಿಂಗವನ್ನು ಸ್ಥಾಪಿಸಿದ್ದಾನೆ. ಸುಕನಾಸಿಯಲ್ಲಿ ಶಿವನ ವಾಹನವಾದ ನಂದಿಯನ್ನು ಕಾಣಬಹುದು.ಅಲ್ಲಿ ಮತ್ತೊಂದು ವಿಗ್ರಹವಿದೆ ಅದು ವಿಘ್ನವಿನಾಶಕ ಗಣೇಶನದೆಂದು ಹೇಳಬಹುದು.ಮುಂದೆ ನಾಲ್ಕು ಸ್ತಂಭಗಳ ನವರಂಗದ ರೀತಿ ಇದೆ.ಆದರೆ ಇದು ತೆರೆದ ನವರಂಗ ಎಂದು ಹೇಳಬಹುದು.ಅಲ್ಲಿ ಪ್ರಮುಖವಾಗಿ ನಾಲ್ಕು ಕಂಬಗಳನ್ನು ನೋಡಬಹುದು.ಅದು ಚಿತ್ರಖಂಡ ಮಾದರಿಯ ಸ್ತಂಭ ಎಂದು ಹೇಳಬಹುದು.ಹೆಸರೇ ಹೇಳುವಂತೆ ಚಿತ್ರ+ಖಂಡ ಅಂದರೆ ಚಿತ್ರಗಳ್ಳುಳ ಭಾಗಗಳು. ಈ ಕಂಬದ ದಿಂಡಿನಲ್ಲಿ ಮೂರು ಚಿತ್ರಿತ ಭಾಗಗಳಿರುತ್ತವೆ. ವಿಶೇಷವಾಗಿ ಚಿತ್ರಿಸಲ್ಪಟ್ಟ ಸ್ತಂಭವೇ ಚಿತ್ರಖಂಡ ಸ್ತಂಭ.

ರಾಮಲಿಂಗ ದೇವಾಲಯದಲ್ಲಿಯೂ ಸಹ ಅದೇ ರೀತಿ ಇದೆ.ಈ ಕಂಬದ ದಿಂಡು ಕೆಳಭಾಗದಲ್ಲಿ ಎತ್ತರವಾಗಿದ್ದು, ಮೇಲಿನ ಎರಡು ಭಾಗಗಳು ಸಮವಾಗಿರುತ್ತವೆ. ಈ ದಿಂಡುಗಳ ಮಧ್ಯಭಾಗದಲ್ಲಿ ಷೋಡಷಾಶ್ರವಾಗಿ ಕಂಡರಿಸಲಾಗಿದೆ.ಇದರ ಮಧ್ಯಭಾಗವು ಸಹ ಒಂದು ಪಟ್ಟಿಕೆಯನ್ನು ಹೊಂದಿರುತ್ತದೆ.ಚೌಕಾಕಾರದ ದಿಂಡಿನ ನಾಲ್ಕು ಮುಖಗಳು ವೈವಿಧ್ಯಮಯವಾದ ಉಬ್ಬು ಶಿಲ್ಪಗಳಿಂದ ಕೂಡಿರುವುದು ಮತ್ತು ಮೇಲ್ಭಾಗದಲ್ಲಿ ಪುಷ್ಪದ ಬೋದಿಗೆಯನ್ನು ಇಡಲಾಗಿದೆ.ಇನ್ನು ವಿತಾನಕ್ಕೆ ಬಂದರೆ ನಾಭಿಚ್ಛಂದ ವಿತಾನವನ್ನು ನೋಡಬಹುದು ಇದರಲ್ಲಿ ಮೇಲ್ಛಾವಣಿಯನ್ನು ಕಲ್ಲಿನ ತೊಲೆಗಳ ಜೋಡಣೆಗಳಿಂದ ಮುಚ್ಚಲಾಗಿರುತ್ತದೆ.ಇದರ ಜೋಡಣೆಯು ಮೂರು ಅಥವಾ ನಾಲ್ಕು ಸ್ತರಗಳಲ್ಲಿದ್ದು ಪ್ರತಿ ಸ್ತರವು ತೆರೆದ ಚೌಕದ ಮೂಲೆಭಾಗವನ್ನು ಮಾತ್ರ ಮುಚ್ಚುತ್ತದೆ.ಈ ರೀತಿ ಎರಡು ಮೂರು ಸ್ತರದಲ್ಲಿ ಜೋಡಿಸಿದ ಅನಂತರ ಉಳಿದ ಭಾಗಕ್ಕೆ ಏರಿದಂತಾಗುತ್ತದೆ.ಇಂತಹ ವಿತಾನದಲ್ಲಿ ಅವಶ್ಯಕತೆಗೆ ಅನುಗುಣವಾಗಿ ಅಲಂಕರಣಗಳನ್ನು ಮಾಡಿರುವುದನ್ನು ಕಾಣಬಹುದು. ಹಾಗೆಯೇ, ನಂದಿ, ವೀರಭದ್ರ, ಶಿವಲಿಂಗ, 2 ಹಾವುಗಳು, ಮರ್ಕಟ, ಗಜ, ವೀರಭದ್ರ, ಲಿಂಗ, ಕಲಶ, ಗಣಪತಿ, ವ್ಯಾಳ, ಶಿವಲಿಂಗಕ್ಕೆ 2 ಸರ್ಪಗಳು ಸುತ್ತಿಕೊಂಡಿರುವುದು.ನಂದಿ, ಚಕ್ರ, ಸರ್ಪಗಳಿಂದ ರಂಗವಲ್ಲಿಯ ರೂಪದಚಿತ್ರ ಲಿಂಗ, ಭೈರವ, ನಂದಿ, ಭಕ್ತ, ರಂಗೋಲಿಯ ಹಸೆ, ಆಂಜನೇಯ ಸುಬ್ರಹ್ಮಣ್ಯ.ಗರ್ಭಗುಡಿಯ ಮೇಲ್ಭಾಗದಲ್ಲಿ 10 ಅಡಿಯ ಒಂದು ಸಣ್ಣ ಗೋಪುರವನ್ನು ಕಾಣಬಹುದು.ಅದರಲ್ಲಿ ಬಸವನ ವಿಗ್ರಹವಿದೆ.

ಒಟ್ಟಾರೆಯಾಗಿ; ಹುಣಸೂರು ತಾಲೋಕಿನ ಶೈವ ಪರಂಪರೆಯ ದೇವಾಲಯಗಳ ಕಲೆ ಮತ್ತು ವಾಸ್ತುಶಿಲ್ಪಗಳ ಬಗೆಗೆ ದಾಖಲೀಕರಿಸಲಾಗಿದೆ.

**ಗ್ರಂಥಸೂಚಿ**


1. ಅಭಿಶಂಕರ್ (ಸಂ): ಕರ್ನಾಟಕ ರಾಜ್ಯ ಗ್ಯಾಸೆಟಿಯರ್, 2010.
2. ಅರವಿಂದ ಮಾಲಗತ್ತಿ (ಪ್ರ.ಸಂ.): ಕನ್ನಡ ವಿಷಯ ವಿಶ್ವಕೋಶ – ಸಂಪುಟ 1, 2005.
3. ಕೃಷ್ಣರಾವ್ ಎಂ.ವಿ. ಮತ್ತು ಎಂ.ಕೇಶವಭಟ್ಟ: ಕರ್ನಾಟಕದ ಇತಿಹಾಸ ದರ್ಶನ,1970.
4. ಗೋಪಾಲ್ ಆರ್. (ಸಂ): ಮೈಸೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ,2010.
5. ದೇವರಕೊಂಡಾರೆಡ್ಡಿ: ತಲಕಾಡಿನ ಗಂಗರ ದೇವಾಲಯಗಳು, 1994.
6. ನಾಗರಾಜರಾವ್ ಎಚ್.ಎಂ: ಶಿವಶೋಧ, 2008.
7. ಮೈಸೂರು ನಾಗರಾಜ ಶರ್ಮ: ಹೊಯ್ಸಳ ಶಿಲ್ಪದಲ್ಲಿ ಶಿವ, 2010.
8. ರಾಮಚಂದ್ರರಾವ್ ಎಸ್.ಕೆ: ಮೂರ್ತಿಶಿಲ್ಪ ನೆಲೆ ಹಿನ್ನೆಲೆ, 1975.
9. ಶಾಮಸುಂದರ್ ಬಿ: ಹುಣಸೂರು ತಾಲೂಕು ಗ್ಯಾಸೆಟಿಯರ್, 2011.
10. ಶ್ರೀಕಂಠಶಾಸ್ತ್ರಿ ಎಸ್: ಹೊಯ್ಸಳ ವಾಸ್ತುಶಿಲ್ಪ, 1965.